ವಿಮಾನ, ಧಡಬಡಿಸಿ ಓಡುವ ರೈಲು ಮತ್ತು ತೂಗುತ್ತ ತೇಲುತ್ತ ಮುಂದೊತ್ತಿ ಹೋಗುವ ಹಡಗು ನನ್ನಲ್ಲಿ ಅದನ್ನು ತುಂಬುತ್ತದೆ.''

ಅಂತೆಯೇ ಈಕೆ ಯಾವತ್ತೂ ಒಂದೇ ಕಡೆ ಇರುವುದಿಲ್ಲ. ಕಾದಂಬರಿಯಲ್ಲಿ ಪುಟದಿಂದ ಪುಟಕ್ಕೆ ಅವಳಿರುವ ನಗರ, ದೇಶ ಬದಲಾಗುತ್ತಲೇ ಇರುತ್ತದೆ. ಕಾದಂಬರಿಯ ಬಹಳಷ್ಟು ಕಥಾನಕಗಳು ಸಾಗುವುದು ಯಾವುದಾದರೂ ಏರ್‌ಪೋರ್ಟಿನಲ್ಲಿ, ರೈಲ್ವೇ ಸ್ಟೇಶನ್ನಿನಲ್ಲಿ ಅಥವಾ ಪ್ರಯಾಣದ ನಡುವಿನಲ್ಲಿ. ಈ ನಿರಂತರ ಚಲನೆ ಮತ್ತು ದೇಶ–ಕಾಲ ಪರಿವರ್ತನೆಯ ತಂತ್ರವೇ ಈ ಸಂಕೀರ್ಣವಾದ ಕಾದಂಬರಿಯ ಲಕ್ಷಣವಾಗಿದೆ.

ಪ್ರಯಾಣದುದ್ದಕ್ಕೂ ತಾನು ಕಂಡಿದ್ದನ್ನು ದಾಖಲಿಸುತ್ತ ಸಾಗುವಂತೆ ಬರುವ ಈ ಕಾದಂಬರಿಯಲ್ಲಿ ನಾಲ್ಕೈದು ಪುಟಗಳಿಗೊಮ್ಮೆ ಕಥಾಂತರವಾಗುತ್ತದೆ. ಮುಂದೇನಾಯಿತು ಎನ್ನುವುದರ ಗಂಧಗಾಳಿ ಸಿಗದಂತೆ ಇನ್ಯಾವುದೋ ಒಂದು ದೃಶ್ಯ, ಇನ್ಯಾವುದೋ ಸ್ಥಳ, ಇನ್ಯಾರೋ ಬಂದು 'ಕತೆ'ಯಾಗುತ್ತಾರೆ. ಒಂದು ಮ್ಯೂಸಿಯಮ್ಮಿನ ವಿವರ ಬರುತ್ತಿರುವಾಗಲೇ ಥಟ್ಟನೆ ಅದು ನಿಂತು ನಡುವಯಸ್ಸಿನ ಒಬ್ಬ ಮಹಿಳೆ ತಾನು ಹೇಗೆ ಜಗತ್ತಿನ ಮಟ್ಟಿಗೆ ಅದೃಶ್ಯವಾಗಿ ಬದುಕುತ್ತಿದ್ದೇನೆ ಎನ್ನುವುದನ್ನು ವಿವರಿಸುತ್ತಾಳೆ. ನಡುವೆಯೇ ಅದು ಅಲ್ಲಿಂದ ನೇರವಾಗಿ ತನ್ನ ಮಡದಿ ಮತ್ತು ಮಗುವನ್ನು ಕ್ರೋಶಿಯಾದ ದ್ವೀಪದಲ್ಲಿ ಇದ್ದಕ್ಕಿದ್ದಂತೆ ಕಳೆದುಕೊಂಡ ಒಬ್ಬ ಸಹಪ್ರಯಾಣಿಕನ ಕತೆಗೆ ಹಾರುತ್ತದೆ. ಬಹುಶಃ ಇಡೀ ಕಾದಂಬರಿಯಲ್ಲಿ ಒಂದು ಅಧ್ಯಾಯದಷ್ಟು ಸುದೀರ್ಘವಾಗಿ ಸಾಗುವ ಒಂದೇ ಒಂದು ಕಥಾನಕ ಈತನದು. ಆದರೆ ಹಾಗೆ ಇದ್ದಕ್ಕಿದ್ದಂತೆ ಕಣ್ಣೆದುರೇ ಕಾರಿನಿಂದಿಳಿದು ಹೋದ ಹೆಂಡತಿ ಮತ್ತು ಮಗು, ಕೇವಲ ಹತ್ತು ಕಿಲೋಮೀಟರ್ ರೇಡಿಯಸ್ಸಿನ ದ್ವೀಪದಿಂದ ಹೇಗೆ ಮಾಯವಾದರು, ಪೊಲೀಸ್ ಶ್ವಾನದಳ, ಹೆಲಿಕಾಪ್ಟರ್ ಎಲ್ಲ ತರಿಸಿ ಅರಸಿದರೂ ಅದು ಹೇಗೆ ಕಣ್ಣಿಗೆ ಬೀಳದೆ ಉಳಿದರು ಎನ್ನುವುದು ನಿಗೂಢವಾಗಿ ಉಳಿಯುತ್ತದೆ. ಅಲ್ಲಿಗೇ ಮುಗಿದು ಹೋಗುವ ಈ ಕಥಾನಕದ ಬಗ್ಗೆ ಮುಂದೇನಾಯಿತು ಎನ್ನುವ ಕುತೂಹಲ ಓದುಗನನ್ನು ಕಾಡುತ್ತಲೇ ಇರುತ್ತದೆ.




ಕತ್ತರಿಸಿ ತೆಗೆಯಲಾದ ತನ್ನದೇ ಕಾಲಿನ ಪೇಯಿಂಟಿಂಗ್ ಮಾಡುವ ಹದಿನೇಳನೆಯ ಶತಮಾನದ ಡಚ್ ಅನಾಟಮಿಸ್ಟ್ ಫಿಲಿಪ್‌ನ ಕತೆ, ಇದ್ದಕ್ಕಿದ್ದಂತೆ ಬಂದ ಒಂದು ಇ–ಮೇಲ್‌ಗೆ ಸ್ಪಂದಿಸಿ ತನ್ನ ಮೊದಲ ಪ್ರೇಮಿಯನ್ನು ಭೇಟಿಯಾಗಲು ಹೊರಟ ಮಹಿಳೆಯ ಕತೆ, ಅನಾಮಿಕ ಭಿಕ್ಷುಕಿಯಂತೆ ಬದುಕುವುದಕ್ಕೆಂದೇ ಮನೆಯಿಂದ ಇದ್ದಕ್ಕಿದ್ದಂತೆ ಹೊರಬಿದ್ದು ನಡೆದ ಹೆಂಗಸಿನ ಕತೆ, ಮ್ಯೂಸಿಯಮ್ಮಿನಲ್ಲಿ ಸಂರಕ್ಷಿಸಿಡಲಾದ ತನ್ನ ಹದಿನೆಂಟನೆಯ ಶತಮಾನದ ತಂದೆಯ ದೇಹವನ್ನು ತಮಗೆ ಬಿಟ್ಟುಕೊಡಿ ಎಂದು ಪತ್ರ ಬರೆಯುತ್ತಿರುವ ಮಗಳ ಕತೆ – ಹೀಗೆ ಪರಸ್ಪರ ಸಂಬಂಧವಿಲ್ಲದ ಕಥಾನಕಗಳು ಒಂದರ ಹಿಂದೊಂದರಂತೆ, ದೇಶ–ಕಾಲ ಸಂಬಂಧವನ್ನು ಮೀರಿ ಬರುತ್ತಿರುತ್ತವೆ. ಈ ಪರಸ್ಪರ ಸಂಬಂಧ ಇಲ್ಲದಂತಿರುವುದು ಮತ್ತು ನಿರ್ದಿಷ್ಟವಾದ ಒಂದು ಅಂತ್ಯ ಈ ಕಥಾನಕಗಳಿಗೆ ಇಲ್ಲದೇ ಇರುವುದು ಇದರ ನಿರೂಪಣೆಯ ತಂತ್ರಗಾರಿಕೆಯೂ ಆಗಿದೆ.

ನಿರೂಪಕಿಗೆ ವಸ್ತುಗಳನ್ನು ಹೆಸರಿಸುವುದರಿಂದ ಅವುಗಳ ಗುಣಸ್ವಭಾವವೇ ಬದಲಾಗಿ ಬಿಡುತ್ತದೆ ಎನ್ನುವ ದೃಢವಾದ ಅಭಿಪ್ರಾಯವಿದೆ. ಒಬ್ಬ ದೋಣಿ ನಡೆಸುವ ವ್ಯಕ್ತಿ ತಾನು ಬದಲಿಸಿಕೊಂಡ ಹೆಸರನ್ನು ಬಿಟ್ಟು ತನ್ನ ಮೂಲ ಹೆಸರೇ ತನಗೆ ಬೇಕೆಂದು ಬಯಸುವ ಸನ್ನಿವೇಶವೊಂದು ಬರುತ್ತದೆ ಇಲ್ಲಿ. ಒಂದು ವಸ್ತುವನ್ನು ನಾವು ಏನೆಂದು ಕರೆಯುತ್ತೇವೆಯೋ ಅದು ಅದನ್ನು ಒಂದು ಚೌಕಟ್ಟಿನಲ್ಲಿರಿಸಿ ಬಂಧಿಸಿ